ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಅಂಕೋಲಾ

ಸಿಸಿ ನಂಬರ. 557/2023

ಸಿ ಡಬ್ಲ್ಯೂ-20

ಪಿ ಡಬ್ಲ್ಯೂ- 8

ದಿಃ 01-03-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಸಾಕ್ಷಿಯ ಹೆಸರುಃ ಪ್ರೇಮನಗೌಡ ಪಾಟೀಲ್

ತಂದೆಯ ಹೆಸರುಃ ಗುರುಸಿದ್ದಪ್ಪ ಪಾಟೀಲ್

ವಯಸ್ಸುಃ 31 ವರ್ಷ

ಉದ್ಯೋಗಃ ಪಿ.ಎಸ್.ಐ., ರಾಜ್ಯ ಗುಪ್ತವಾರ್ತೆ ಕಲಬುರ್ಗಿ

ವಿಳಾಸಃ ಕಲಬುರ್ಗಿ

ಮುಖ್ಯ ವಿಚಾರಣೆ ಮಾನ್ಯ ಎ ಪಿ ಪಿ ಯವರಿಂದಃ

ನಾನು ದಿಃ 27-01-2021 ರಿಂದ ದಿಃ 20-06-2023 ರವರೆಗೆ ಅಂಕೋಲಾ ಪೋಲೀಸ್ ಠಾಣೆಯಲ್ಲಿ ಪಿ.ಎಸ್.ಐ ಆಗಿ ಕರ್ತವ್ಯವನ್ನು ನಿರ್ವಹಿಸಿರುತ್ತೇನೆ.

2. ದಿಃ12-04-2023 ರಂದು ರಾತ್ರಿ 11.00 ಗಂಟೆಗೆ ಚಾಸಾ-1 ರವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಸ್ವೀಕರಿಸಿಕೊಂಡು ಠಾಣಾ ಗುನ್ನಾ ನಂ.78/2023 ಕಲಂ 279, 304ಎ ಐ.ಪಿ.ಸಿ ಹಾಗೂ 187 ಐ ಎಂ ವಿ ಕಾಯ್ದೆಯಡಿಯಲ್ಲಿ ಪ್ರಕರಣವನ್ನು ದಾಖಲಿಸಿಕೊಂಡಿರುತ್ತೇನೆ. ಸಾಕ್ಷಿಯು ನಿಪಿ-1ರ ಮೇಲಿರುವ ಸಹಿಯನ್ನು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-1ಬಿ ಎಂದು ಗುರುತಿಸಲಾಯಿತು. ಸಾಕ್ಷಿಯು

ಪ್ರಥಮ ವರ್ತಮಾನ ವರದಿಯ ಮೇಲಿರುವ ತಮ್ಮ ಸಹಿಯನ್ನು ಗುರುತಿಸಿದ್ದು, ಪ್ರಥಮ ವರ್ತಮಾನ ವರದಿ ನಿಪಿ-15 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-15ಎ ಎಂದು ಗುರುತಿಸಲಾಯಿತು. ನಂತರ ರಾತ್ರಿ 11.30 ಗಂಟೆಗೆ ಚಾಸಾ-16 ರವರ ಮುಖಾಂತರ ಪ್ರಥಮ ವರ್ತಮಾನ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ದಿಃ13-04-2023 ರಂದು ಈ ಪ್ರಕರಣದ ಮುಂದಿನ ತನಿಖೆಗಾಗಿ ಚಾಸಾ-21 ರವರಿಗೆ ವಹಿಸಿಕೊಟ್ಟಿರುತ್ತೇನೆ.

ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ ವಿ.ವಿ.ಎಸ್ ಇವರಿಂದಃ

3. ಫಿರ್ಯಾದನ್ನು ಬೆದುಕೊಂಡು ಬಂದಿದ್ದರಾ ಅಥವಾ ಹಾಗೆ ಬಂದಿದ್ದರಾ ಎಂದರೆ ಬರೆದುಕೊಂಡು ಬಂದಿದ್ದರು ಎಂದು ನುಡಿಯುತ್ತಾರೆ. ಫಿರ್ಯದಿನಲ್ಲಿ ಪ್ಯಾರಾಗಳು ಸರಿಯಾಗಿ ಇರುವುದಿಲ್ಲ ಎಂದರೆ ಸಾಕ್ಷಿಯು ಅವರಿಗೆ ಹೇಗೆ ತಿಳಿದಿರುತ್ತದೆಯೋ ಹಾಗೆ ಬರೆದುಕೊಂಡು ಬಂದಿರುತ್ತಾರೆ, ಅವರಿಗೆ ಗೊತ್ತಾಗಿರುವುದಿಲ್ಲ ಎಂದು ನುಡಿಯುತ್ತಾರೆ. ಫಿರ್ಯಾದಿನ ಸಾಲುಗಳಲ್ಲಿಯೂ ಸಹ ಅಂತರ ಜಾಸ್ತಿ ಹಾಗೂ ಕಡಿಮೆ ಕಂಡುಬರುತ್ತದೆ ಎಂದರೆ ಸರಿಯಲ್ಲ. ಈ ಫಿರ್ಯಾದು ಸುಳ್ಳು ಎಂದು ಗೊತ್ತಿದ್ದರೂ ಸಹ ಮೃತರ ಕುಟುಂಬಕ್ಕೆ ಪರಿಹಾರ ಕೊಡಿಸಬೇಕು ಎನ್ನುವ ಉದ್ದೇಶದಿಂದ ಸುಳ್ಳು ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿರುತ್ತೀರಿ ಎಂದರೆ ಸರಿಯಲ್ಲ. ಅಪಘಾತವಾಯಿತು ಎಂದು ಹೇಳುವ ಸ್ಥಳದಲ್ಲಿ ಅಪಘಾತವಾದ ನಂತರ ಸಾಕಷ್ಟು ಜನರು ಸೇರಿದ್ದರು ಎಂದರೆ ಸರಿ. ನೀವು

ಸುಳ್ಳು  ಪಿರ್ಯಾದಿಗೆ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ).

ಓ ಹೇ ಕೇ ಸರಿ ಇದೆ

ಹೆಚ್ಚುವರಿ ಜೆ.ಎಂ.ಎಫ್.ಸಿ., ಅಂಕೋಲಾ.